ಸಾಕ್ಷಿಯನ್ನು ದಿನಾಂಕಃ 09-01-2020 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟಿ ಸವಾಲುಃ ಶ್ರೀ ಎಂ ಎಂ ಜೆ ವಕೀಲರಿಂದಃ

ಮೂಲ ದಾವಾ ನಂ. 52/1996 ರಲ್ಲಿ ಆದ ಅಪೀಲು ನಿಖಾಲೆ ಆಗಿದೆ ಎಂದರೆ ಸರಿ . ಅದು ನಮ್ಮ ಪರವಾಗಿ ಆಗಿದೆ . ಅಪೀಲನ್ನು ನಾವು ಮಾಡಿರಲಿಲ್ಲಾ. ಸದರಿ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ 2 ನೇ ಅಪೀಲನ್ನು ಮಾಡಿರುವುದಿಲ್ಲಾ . ಮೂಲ ದಾವಾ ನಂ. 47/1996 ರಲ್ಲೂ ಕೂಡಾ ಪ್ರೇಮಚಂದ್ರ ಮಾಧವ ಆಚಾರಿ ಮತ್ತು ವಿಶ್ವನಾಥ ಮಾಧವ ಆಚಾರಿ ಇವರುಗಳು ಪಕ್ಷಗಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲಾ. ಮೂಲ ದಾವಾ ನಂ. 52/1996

ರಲ್ಲಿ ಅವರು ಪಕ್ಷಗಾರರಾಗಿದ್ದರಾ ಎಂಬ ಪ್ರಶ್ನೇಗೆ ಸಾಕ್ಷಿ ಆದಾವೆಯನ್ನು ಅವರುಗಳೇ ಮಾಡಿದ್ದರು ಎನ್ನುತ್ತಾರೆ . ಈ ದಾವಾ ದಾಖಲಿಸುವ ಪೂರ್ವದಲ್ಲಿ ಮೂಲ ದಾವಾ ನಂ. 22/2007 ನ್ನು ಅವರುಗಳೇ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲಾ . ಮೂಲ ದಾವಾ ನಂ. 22/2007 ರಲ್ಲಿ ನಾನು ಜವಾಬು ನೀಡಲು ಬಂದಿದ್ದೇನೋ ಇಲ್ಲವೋ ನನಗೆ ನೆನಪಿಲ್ಲಾ. ಸದರಿ ದಾವೆಯಲ್ಲಿ ಉಮೇಶ ನಾಯ್ಕ (ಈ ದಾವೆಯ 6 ನೇ ಪ್ರತಿವಾದಿಯ ಗಂಡ) ಪಕ್ಷಗಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲಾ . ಈ ದಾವೆಯನ್ನ ವಿಶ್ವನಾಥ ಮಾಧವ ಆಚಾರಿ ಮತ್ತು ಪ್ರೇಮಚಂದ್ರ ಮಾಧವ ಆಚಾರಿ ಇಬ್ಬರೂ ಸೇರಿ ಮಾಡಿದ್ದಾರೆ . ಸಾಕ್ಷಿಗೆ ಈ ದಾವೆಯ ದಾವಾ ಪತ್ರವನ್ನು ನೀಡಿ ಇದಲ್ಲಿ ಪ್ರೇಮಚಂದ್ರ ಮಾಧವ ಆಚಾರಿಯವರು ಪಕ್ಷಗಾರರಾಗಿದ್ದಾರೆಯೇ ಎಂದು ಕೇಳಲಾಗಿ ಸಾಕ್ಷಿ ಅವರು ಈ ದಾವೆಯಲ್ಲಿ ಪಕ್ಷಗಾರರಾಗಿಲ್ಲಾ ಎನ್ನುತ್ತಾರೆ . 6 ನೇ ಪ್ರತಿವಾದಿಯ ಗಂಡ ಈ ದಾವಾ ಆಸ್ತಿಯನ್ನ ಖರೀದಿಮಾಡಿದ್ದಾರೆ ಎಂದರೆ ಸಾಕ್ಷಿ ಸ .ನಂ. 401 ಹಿಸ್ಸಾ 1/3 ಅನ್ನು ಖರೀದಿಮಾಡಿದ್ದಾರೆ ಎನ್ನುತ್ತಾರೆ . ಸಾಕ್ಷಿ ಮುಂದುವರೆದು ಆ ಸರ್ವೆ ನಂಬರ್ ಈಗ ಅಸ್ತಿತ್ವದಲ್ಲಿ ಇಲ್ಲಾ ಎನ್ನುತ್ತಾರೆ . ಸರ್ವೆ ನಂ. 401 ಕ್ಕೆ ಇದ್ದಂತಹ ಎಲ್ಲಾ ಪೋಟ್ ಹಿಸ್ಸಾಗಳು ಈಗ ರದ್ದಾಗಿದೆ ಎಂದರೆ ಸರಿಯಲ್ಲಾ . ಡಿ. ಡಿ. ಎಲ್ ಆರ್ ನ್ಯಾಯಾಲಯದಲ್ಲಿ ಈ ಬಗ್ಗೆ ಪ್ರಕರಣ ನಂ. ಭೂ ದಾಖಲೆ ಮೇಲ್ಮನವಿ ನಂ. 26/2010-2011 ರಂತೆ ದಿಃ 26-05-2011 ರಂದು ತೀರ್ಮಾನವಾಗಿದೆ ಎಂದರೆ ಸಾಕ್ಷಿ ಆ ತೀರ್ಮಾನದ ಪ್ರಕಾರ ಸ . ನಂ. 401/1 ಹಾಗೂ ಸ. ನಂ. 403 ಅದಲುಬದಲು ಆಗಿದೆ ಎಂದು ಆದೇಶವಾಗಿದೆ ಎನ್ನುತ್ತಾರೆ . ನಾನು ಆ ಆದೇಶವನ್ನು ನೋಡಿರುತ್ತೇನೆ . ಸದರಿ ಆದೇಶ ಈಗ ರದ್ದಾಗಿದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆ. ಸ. ನಂ. 401 ಕ್ಕೆ ಒಟ್ಟೂ 3 ಪೋಟ್ ಹಿಸ್ಸಾಗಳು ಇವೆ . ಅವು ಸ. ನಂ. 401/1, 401/2, 401/3. ಈ ಮೊದಲು ಉಮೇಶ ವೆಂಕಟಪತಿ ನಾಯ್ಕ ರವರ ಮೇಲೆ ಒಂದು ದಾವೆ ಮಾಡಿ ಆ ದಾವೆ ಕಿತ್ತು ಹೋದ್ದರಿಂದ ಪುನಃ ಈ ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲಾ. ಉಮೇಶ ವೆಂಕಟಪತಿ ನಾಯ್ಕ ರವರ ಮೇಲೆ ಮಾಡಿದ ದಾವಾ ನಂಬರ್ ನನಗೆ ನೆನಪಿಲ್ಲಾ . ಆ ದಾವೆಯ ನಂಬರ ನನಗೆ ಗೊತ್ತಿದ್ದರೂ ಆ ದಾವೆಯಲ್ಲಿ ನಾನು ಹಾಜರಾಗಿದ್ದರೂ ಕೂಡಾ ಗೊತ್ತಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ, ಹೊನ್ನಾವರ.